KARNATAKA LEGISLATIVE ASSEMBLY, RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

22

/ ವಿಷಯ : DEPARTMENT / SUBJECT: ಕೋವಿಡ್-19

ಹೆಸರು : NAME OF THE NEWS PAPER: ಉದಯವಾಣಿ    ದಿನಾಂಕ : DATE : 12/3/21

# ಮತ್ತೆ ಮಹಾ ಲಾಕ್?

## ನೆರೆ ರಾಜ್ಯದಲ್ಲಿ ಹೆಚ್ಚುತ್ತಿದೆ ಕೊರೊನಾ । ಕರ್ನಾಟಕದಲ್ಲೂ ಭಾರೀ ಎಚ್ಚರಿಕೆ

## ಗುರುವಾರ 13 ಸಾವಿರ ಪ್ರಕರಣ । ಮಾ.15ರಿಂದ ನಾಗ್ಪುರದಲ್ಲಿ ನಿರ್ಬಂಧ

ಬೆಂಗಳೂರು/ಮುಂಬೈ/ನವದೆಹಲಿ: ಹೊಸ ವರ್ಷದ ಮೊದಲೆರಡು ತಿಂಗಳಲ್ಲಿ ಹೆಚ್ಚು ಕಡಿಮೆ ಕೊರೊನಾ ಸಂಖ್ಯೆಯಲ್ಲಿ ಭಾರೀ ಇಳಿಮುಖವಾಗಿದ್ದು, ಮಾರ್ಚ್‌ನಲ್ಲಿ ಮತ್ತೆ ಕೇಸುಗಳ ಸಂಖ್ಯೆಯಲ್ಲಿ ಹೆಚ್ಚಳ ಕಂಡು ಬರುತ್ತಿದೆ.

ಮಹಾರಾಷ್ಟ್ರದಲ್ಲಿ ಗಂಭೀರ ಸ್ಥಿತಿ ಎದುರಾಗಿದ್ದು, ಕೆಲವು ನಗರಗಳಲ್ಲಿ ಲಾಕ್‌ಡೌನ್ ಆತಂಕ ಎದುರಾಗಿದೆ. ಮಾ.15ರಿಂದ 21ರ ವರೆಗೆ ನಾಗ್ಪುರದಲ್ಲಿ ಲಾಕ್‌ಡೌನ್ ಹೇರಿಕೆ ಮಾಡಲು ಮಹಾ ಸರ್ಕಾರ ನಿರ್ಧರಿಸಿದೆ. ಅಷ್ಟೇ ಅಲ್ಲ, ಇನ್ನೂ ಕೆಲವು ನಗರಗಳಿಗೆ ಲಾಕ್‌ಡೌನ್ ವಿಸ್ತರಣೆಯಾಗಬಹುದು ಎಂದು ಸಿಎಂ ಉದ್ಧವ್ ಠಾಕ್ರೆ ಎಚ್ಚರಿಕೆ ನೀಡಿದ್ದಾರೆ.

**ಹೊಸ ವರ್ಷದಲ್ಲಿ ದಾಖಲೆ:** ದೇಶದಲ್ಲಿ ಕಳೆದ 24 ಗಂಟೆಗಳಲ್ಲಿ 22,854 ಪ್ರಕರಣಗಳು ದೃಢಪಟ್ಟಿದ್ದು, ಡಿಸೆಂಬರ್ ನಂತರ ಇದೇ ಮೊದಲ ಬಾರಿಗೆ ಭಾರೀ ಪ್ರಮಾಣದ ಕೇಸುಗಳು ಕಾಣಿಸಿಕೊಂಡಿವೆ. ಇದರಲ್ಲಿ ಮಹಾರಾಷ್ಟ್ರವೊಂದರಲ್ಲೇ ಅರ್ಧದಷ್ಟು ಕೇಸುಗಳು ಪತ್ತೆಯಾಗಿವೆ. ಅಂದರೆ, ಬುಧವಾರ ಬೆಳಗ್ಗೆ 8 ಗಂಟೆಯಿಂದ ಗುರುವಾರ ಬೆಳಗ್ಗೆ 8 ಗಂಟೆ ವರೆಗೆ ಮಹಾರಾಷ್ಟ್ರದಲ್ಲಿ 13,659 ಪ್ರಕರಣಗಳು ದೃಢಪಟ್ಟಿವೆ.



**ನಾಗ್ಪುರದಲ್ಲಿ ಲಾಕ್‌ಡೌನ್:** ಮಹಾರಾಷ್ಟ್ರದ ನಾಗ್ಪುರದಲ್ಲಿ ಮಾ. 15ರಿಂದ ಏ. 21ರವರೆಗೆ ಲಾಕ್‌ಡೌನ್ ಜಾರಿಗೊಳಿಸಲಾಗಿದೆ. ತರಕಾರಿ-ಹಣ್ಣು ಮಾರಾಟ, ಹಾಲಿನ ಕೇಂದ್ರಗಳಂಥ ಅಗತ್ಯ ಸೇವೆಗಳನ್ನು ಮಾತ್ರ ಮುಂದುವರಿಸಲು ಅವಕಾಶ ಕಲ್ಪಿಸಿ, ಮಿಕ್ಕೆಲ್ಲಾ ವ್ಯಾಪಾರ-ವಹಿವಾಟು, ಜನರ ಓಡಾಟಕ್ಕೆ ನಿರ್ಬಂಧ ಹೇರಲಾಗಿದೆ. ನಾಗ್ಪುರಕ್ಕೆ ಸಂಬಂಧಿಸಿದ ಎಲ್ಲಾ ಪ್ರಾಂತ್ಯಗಳಲ್ಲಿ ಲಾಕ್‌ಡೌನ್ ನಿಯಮ ಜಾರಿಗೊಳ್ಳುತ್ತದೆ ಎಂದು ನಾಗ್ಪುರ ಪೊಲೀಸ್ ಕಮಿಷನರ್ ಕಚೇರಿ ಪ್ರಕಟಿಸಿದೆ.

**ರಾಜ್ಯಕ್ಕೆ ಮಹಾರಾಷ್ಟ್ರದ್ದೇ ಆತಂಕ:** ನೆರೆಯ ಮಹಾರಾಷ್ಟ್ರದಲ್ಲಿ ಕೊರೊನಾ ಎರಡನೇ ಅಲೆಯ ಅಬ್ಬರದ ಹಿನ್ನಲೆ ರಾಜ್ಯದಲ್ಲಿಯೂ ಸೋಂಕು ಹೆಚ್ಚಳವಾಗುವ ಆತಂಕ ಮೂಡಿದೆ. ಇದಕ್ಕೆ ಪೂರಕವೆಂಬಂತೆ ರಾಜ್ಯದಲ್ಲಿ ಕಳೆದ ತಿಂಗಳಿಗೆ ಹೋಲಿಸಿದರೆ ಸದ್ಯ ಸೋಂಕು ಪ್ರಕರಣಗಳು ಶೇ.50ರಷ್ಟು ಹೆಚ್ಚಾಗಿದ್ದು, ಸೋಂಕಿತರ ಸಾವು ದುಪ್ಪಟ್ಟಾಗಿವೆ.

ಅಂದರೆ, ಫೆಬ್ರವರಿ ತಿಂಗಳ ಮೊದಲ ಹತ್ತು ದಿನ ಸರಾಸರಿ 422 ಕೇಸುಗಳು ದಾಖಲಾಗುತ್ತಿದ್ದರೆ, ಈ ತಿಂಗಳ ಮೊದಲ ಹತ್ತು ದಿನದಲ್ಲಿ 555 ಕೇಸುಗಳು ದಾಖಲಾಗಿವೆ. ಹಾಗೆಯೇ ಸಾವಿನ ಸಂಖ್ಯೆಯಲ್ಲಿ ಮೊದಲ ಹತ್ತು ದಿನ 2 ಸಾವು ದಾಖಲಾಗಿದ್ದರೆ, ಈಗ ಐವರು ಸಾವನ್ನಪ್ಪಿದ್ದಾರೆ.

**ಹಿಂದಿನ ತಪ್ಪಿನಿಂದ ಪಾಠ ಕಲಿಯಬೇಕು!:** ಕಳೆದ ವರ್ಷ ಲಾಕ್‌ಡೌನ್‌ನಲ್ಲೂ ಗಡಿಪ್ರದೇಶಗಳ ಭದ್ರತಾ ವೈಫಲ್ಯದಿಂದ ನಿಜಾಮುದ್ದೀನ್, ಅಹಮದಾಬಾದ್‌ನ ತಬ್ಲಿಘೀ ಜಮಾತ್ ಸದಸ್ಯರು, ಅಜ್ಮೀರ್ ಧಾರ್ಮಿಕ ಯಾತ್ರಿಗಳು, ಮಹಾರಾಷ್ಟ್ರ ವಲಸೆ ಕಾರ್ಮಿಕರು, ದೆಹಲಿ ಪ್ರಯಾಣಿಕರು ರಾಜ್ಯಕ್ಕೆ ಆಗಮಿಸಿ ಸೋಂಕಿನ ಹೆಚ್ಚಳಕ್ಕೆ ಕಾರಣವಾಗಿದ್ದರು. ಸದ್ಯ ಅನ್‌ಲಾಕ್ ಆಗಿದ್ದು, ಮಹಾರಾಷ್ಟ್ರ ಮತ್ತು ಕೇರಳದಿಂದ ಬರುವವರಿಗೆ ಸೋಂಕು ಪರೀಕ್ಷಾ ವರದಿ ಕಡ್ಡಾಯ ಮಾಡಲಾಗಿದೆ. ಆದರೆ, ಬಂದ ನಂತರವೂ ಹಲವರಲ್ಲಿ ಸೋಂಕು ಕಾಣಿಸಿಕೊಳ್ಳುತ್ತಿದೆ. ಇದೇ ಬೆಂಗಳೂರಿನ ಕ್ಲಸ್ಟರ್ ಸೋಂಕಿಗೆ ಕಾರಣವಾಗಿದೆ. ಹೀಗಾಗಿ, ಗಡಿಯಲ್ಲಿ ತಪಾಸಣೆ ಉನ್ನತೀಕರಿಸಬೇಕು, ಕೆಲ ದಿನ ಗಡಿ ಬಂದ್ ಮಾಡಬೇಕು. ಹೊರರಾಜ್ಯ ಪ್ರಯಾಣಿಕರಿಗೆ ಕ್ವಾರಂಟೈನ್ ನಿಯಮ ಕಡ್ಡಾಯಗೊಳಿಸಬೇಕು ಎಂಬ ಅಭಿಪ್ರಾಯ ಕೇಳಿಬಂದಿದೆ.




### ಎಲ್ಲೆಲ್ಲಿ ಹೆಚ್ಚು?

ಅತಿ ಹೆಚ್ಚು ಕೊರೊನಾ ಕೇಸು ಕಾಣಿಸಿಕೊಂಡ ನಗರಗಳ ಪಟ್ಟಿಯಲ್ಲಿ ಬೆಂಗಳೂರು ಐದನೇ ಸ್ಥಾನ ಪಡೆದಿದೆ. ಮಹಾರಾಷ್ಟ್ರದ ಎಂಟು ನಗರ, ಕರ್ನಾಟಕ ಮತ್ತು ಕೇರಳದ ತಲಾ ಒಂದು ನಗರಗಳು ಈ ಪಟ್ಟಿಯಲ್ಲಿ ಸ್ಥಾನ ಪಡೆದಿವೆ.

1. ನಾಗ್ಪುರ, 2. ಪುಣೆ, 3. ಥಾಣೆ, 4. ಮುಂಬೈ, 5. ಬೆಂಗಳೂರು ನಗರ, 6. ಎರ್ನಾಕುಲಂ, 7. ಅಮರಾವತಿ, 8. ಜಲ್ಗಾಂವ್, 9. ನಾಸಿಕ್, 10. ಔರಂಗಾಬಾದ್

### ರಾಜ್ಯದಲ್ಲಿ ಅತೀ ಹೆಚ್ಚು ಸೋಂಕು ಇರುವ ಜಿಲ್ಲೆಗಳಿವು

(ಮಾರ್ಚ್‌ನಲ್ಲಿ ನಿತ್ಯ ಸರಾಸರಿ)

ಬೆಂಗಳೂರು (350), ಕಲಬುರಗಿ (24), ಮೈಸೂರು (19), ತುಮಕೂರು (19), ಉಡುಪಿ (17), ದಕ್ಷಿಣ ಕನ್ನಡ (18) ಉಳಿದ ಜಿಲ್ಲೆಗಳಲ್ಲಿ ನಿತ್ಯ ಬೆರಳೆಣಿಕೆಯಷ್ಟು ಪ್ರಕರಣಗಳು ವರದಿಯಾಗುತ್ತಿವೆ.

### ಆರೋಗ್ಯ ಸಚಿವರಿಗೆ ಆತಂಕ



ಮಹಾರಾಷ್ಟ್ರದಲ್ಲಿ ಸೋಂಕು ಹೆಚ್ಚಳವಾಗಿರುವ ಕುರಿತು ಟ್ವೀಟ್ ಮಾಡಿರುವ ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಕೆ. ಸುಧಾಕರ್, 'ನೆರೆಯ ಮಹಾರಾಷ್ಟ್ರದಲ್ಲಿ ಕಳೆದ 24 ಗಂಟೆಗಳಲ್ಲಿ 13,000ಕ್ಕೂ ಹೆಚ್ಚು ಕೊರೊನಾ ಪ್ರಕರಣಗಳು ಪತ್ತೆಯಾಗಿದ್ದು ಇದು ನನ್ನನ್ನು ಚಿಂತೆಗೀಡುಮಾಡಿದೆ. ಇದನ್ನು ಎಚ್ಚರಿಕೆಯ ಗಂಟೆ ಎಂದು ಪರಿಗಣಿಸಿ, ಹಬ್ಬ-ಹರಿದಿನಗಳು, ಸಭೆ-ಸಮಾರಂಭಗಳು ಏನೇ ಇದ್ದರೂ ಮಾಸ್ಕ್ ಧರಿಸುವುದು, ಭೌತಿಕ ಅಂತರವನ್ನು ತಪ್ಪದೇ ಪಾಲಿಸಬೇಕು. ಜನಸಂದಣಿಯಿಂದ ದೂರವಿರಬೇಕು' ಎಂದಿದ್ದಾರೆ.

### ಕರ್ನಾಟಕಕ್ಕೆ ನಾಲ್ಕನೇ ಸ್ಥಾನ

ಇನ್ನು ಬುಧವಾರದಿಂದ ಗುರುವಾರ ಬೆಳಗಿನ ವರೆಗೆ ಪತ್ತೆಯಾಗಿರುವ ಕೇಸುಗಳ ಲೆಕ್ಕಾಚಾರದಲ್ಲಿ ಕರ್ನಾಟಕ ನಾಲ್ಕನೇ ಸ್ಥಾನದಲ್ಲಿದೆ. ಮೊದಲ ಸ್ಥಾನದಲ್ಲಿ ಮಹಾರಾಷ್ಟ್ರವಿದ್ದು, ಅಲ್ಲಿ 13,659 ಕೇಸುಗಳು ದೃಢಪಟ್ಟಿವೆ. ಉಳಿದಂತೆ ಕೇರಳದಲ್ಲಿ 2,475, ಪಂಜಾಬ್‌ನಲ್ಲಿ 1,393, ಕರ್ನಾಟಕದಲ್ಲಿ 760 ಕೇಸುಗಳು ದೃಢಪಟ್ಟಿವೆ.

### ಕೊರೊನಾ ಇನ್ನೂ ಹೋಗಿಲ್ಲ

ದೇಶದಲ್ಲಿ ಕೊರೊನಾ ಇನ್ನೂ ಹೋಗಿಲ್ಲ, ಎಲ್ಲರೂ ಎಚ್ಚರಿಕೆಯಿಂದ ಇರಬೇಕು. ಹಾಗೆಯೇ, ಅವರೆಲ್ಲರೂ ಕೊರೊನಾ ಲಸಿಕೆ ಹಾಕಿಸಿಕೊಳ್ಳಿ ಎಂದು ಕೇಂದ್ರ ಆರೋಗ್ಯ ಇಲಾಖೆ ಮನವಿ ಮಾಡಿದೆ. ಗುರುವಾರ ಬೆಳಗ್ಗೆ ಮಾತನಾಡಿದ ಐಸಿಎಂಆರ್ ಮಹಾ ನಿರ್ದೇಶಕ ಡಾ.ಬಲರಾಮ್ ಭಾರ್ಗವ ಅವರು, ಮಹಾರಾಷ್ಟ್ರದಲ್ಲಿ ಏರಿಕೆಯಾಗುತ್ತಿರುವ ಪ್ರಕರಣಗಳ ಸಂಖ್ಯೆ ಬಗ್ಗೆ ಉಲ್ಲೇಖಿಸಿ, ಈ ಮಾತು ಹೇಳಿದರು.